## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 82(783+775)

ಮಾನ್ಯ ಸದಸ್ಯರ ಹೆಸರು : ಶ್ರೀ ಡಿ.ಟಿ ಶ್ರೀನಿವಾಸ (ಡಿ.ಟಿ.ಎಸ್)(ಶಿಕ್ಷಕರ ಕ್ಷೇತ್ರ) ಹಾಗೂ ಶಶೀಲ್ ಜಿ. ನಮೋಶಿ(ಶಿಕ್ಷಕರ ಕ್ಷೇತ್ರ)

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಉತ್ತರಿಸಬೇಕಾದ ದಿನಾಂಕ : 16.12.2024.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2024-25ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾದ ಜಿ.ಪಿ.ಟಿ ಶಿಕ್ಷಕರ ಸಂಖ್ಯೆ ಎಷ್ಟು; ಹಾಗೂ ಟಿ.ಜಿ.ಟಿ ಶಿಕ್ಷಕರ ಸಂಖ್ಯೆ ಎಷ್ಟು; | 2024-25 ನೇ ಸಾಲಿನಲ್ಲಿ ಇದ್ದಂತೆ ಅಂದರೆ ಪ್ರಸ್ತುತ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಂಜೂರಾದ ಒಟ್ಟು ಜಿ.ಪಿ.ಟಿ ಶಿಕ್ಷಕರ ಹುದ್ದೆಗಳು-51781.<br><br>ಪ್ರಾಥಮಿಕ ಶಾಲೆಗಳಲ್ಲಿ ಪ್ರಸ್ತುತ ಟಿ.ಜಿ.ಟಿ ಶಿಕ್ಷಕರ ವೃಂದ ಅಸ್ತಿತ್ವದಲ್ಲಿರುವುದಿಲ್ಲ. ಆದರೆ ಈ ಹಿಂದೆ ಕೆಲವು ಪ್ರಾಥಮಿಕ ಶಾಲೆಗಳಲ್ಲಿ 8ನೇ ತರಗತಿಯನ್ನು ಸೇರ್ಪಡೆ ಮಾಡಿ ಉನ್ನತೀಕರಿಸಿದ ಸಂದರ್ಭದಲ್ಲಿ 8ನೇ ತರಗತಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ಬೋಧಿಸಲು ಪ್ರೌಢಶಾಲಾ ಸಹ ಶಿಕ್ಷಕರ ವಿದ್ಯಾರ್ಹತೆ ಹೊಂದಿರುವವರನ್ನು ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ 2001-02ರಿಂದ 2009-10ರ ವರೆಗೆ ಒಟ್ಟು 5545 ಟಿ.ಜಿ.ಟಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿತ್ತು.<br><br>ತದನಂತರ, 2017ರಲ್ಲಿ ಹೊಸ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಿ 6 ರಿಂದ 8ನೇ ತರಗತಿಗಳಿಗೆ ಬೋಧಿಸಲು ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು(ಜಿ.ಪಿ.ಟಿ) ವಂದವನ್ನು ಸೃಜಿಸಲಾಗಿದ್ದು, ಅದರಂತೆ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.<br><br>ಈ ಹಿನ್ನೆಲೆಯಲ್ಲಿ ಈ ಹಿಂದೆ ಪ್ರಾಥಮಿಕ ಶಾಲೆಗಳಿಗೆ ನೇಮಕಾತಿ ಮಾಡಿಕೊಳ್ಳಲಾಗಿದ್ದ ಟಿ.ಜಿ.ಟಿ ಶಿಕ್ಷಕರನ್ನು ಹಂತಹಂತವಾಗಿ ಪ್ರೌಢಶಾಲೆಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ. |

| | | |
|---|---|---|
| ಆ) | ಜಿ.ಪಿ.ಟಿ ಶಿಕ್ಷಕರು ಮತ್ತು ಟಿ.ಜಿ.ಟಿ ಶಿಕ್ಷಕರಿಗೂ ಸಮಾನ ಅವಕಾಶ ಕಲ್ಪಿಸಲಾಗಿದೆಯೇ;<br>ತಾರತಮ್ಯವಾಗಿದ್ದಲ್ಲಿ ಅದಕ್ಕೆ ಇರುವ ಕಾರಣಗಳೇನು; | ಜಿ.ಪಿ.ಟಿ ಮತ್ತು ಟಿ.ಜಿ.ಟಿ ಹುದ್ದೆಗಳು ಪ್ರತ್ಯೇಕ ವೃಂದದ ಹುದ್ದೆಗಳಾಗಿದ್ದು, ಪ್ರತ್ಯೇಕ ನೇಮಕಾತಿ ವಿಧಾನ, ಕನಿಷ್ಠ ವಿದ್ಯಾರ್ಹತೆ ಮತ್ತು ಪ್ರತ್ಯೇಕ ವೇತನ ಶ್ರೇಣಿ ಹೊಂದಿರುತ್ತವೆ.<br>ಟಿ.ಜಿ.ಟಿ ಶಿಕ್ಷಕರ ಹುದ್ದೆಯು ಪ್ರೌಢಶಾಲಾ ಸಹಶಿಕ್ಷಕರ ವೃಂದದ ಹುದ್ದೆಯಾಗಿದ್ದು, ವೇತನ ಶ್ರೇಣಿ ರೂ 54175-99400 ಆಗಿರುತ್ತದೆ.<br>ಜಿ.ಪಿ,ಟಿ ಶಿಕ್ಷಕರನ್ನು 6 ರಿಂದ 8 ನೇ ತರಗತಿಗಳ ಬೋಧನೆಗಾಗಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದಕ್ಕೆ ನೇಮಕಾತಿ ಮಾಡಲಾಗುತ್ತದೆ. ಈ ಹುದ್ದೆಯ ವೇತನ ಶ್ರೇಣಿ ರೂ 44425-83700 ಆಗಿರುತ್ತದೆ.<br>ಎರಡೂ ಪ್ರತ್ಯೇಕ ವೃಂದಗಳಾಗಿದ್ದು, ಆಯಾ ವೃಂದಗಳಲ್ಲಿ ವರ್ಗಾವಣೆ ಸೇರಿದಂತೆ ಸಂಬಂಧಿತ ವಿಷಯಗಳಲ್ಲಿ ಸಮಾನ ಅವಕಾಶ ಕಲ್ಪಿಸಲಾಗಿದೆ. |
| ಇ) | ಟಿ.ಜಿ.ಟಿ ಶಿಕ್ಷಕರಿಗೆ ಮೊದಲ ಪ್ರಾತಿನಿಧ್ಯವಾಗಿದ್ದರೆ ಜಿ.ಪಿ.ಟಿ ಶಿಕ್ಷಕರಿಗೂ ಪ್ರಾತಿನಿಧ್ಯ ನೀಡದಿರಲು ಕಾರಣವೇನು; | ಟಿ.ಜಿ.ಟಿ ಶಿಕ್ಷಕರಿಗೆ ಮತ್ತು ಜಿ.ಪಿ.ಟಿ ಶಿಕ್ಷಕರಿಗೆ ಪ್ರತ್ಯೇಕವಾಗಿ ವರ್ಗಾವಣೆಯಲ್ಲಿ ಅವಕಾಶಗಳನ್ನು ಕಲ್ಪಿಸಲಾಗಿದೆ.<br>ಟಿ.ಜಿ.ಟಿ ಶಿಕ್ಷಕರು ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಆದರೆ ಜಿ.ಪಿ.ಟಿ ಶಿಕ್ಷಕರು (6-8 ನೇ ತರಗತಿಗೆ) ನೇಮಕಾತಿಯಾದ ನಂತರ 10 ವರ್ಷಗಳ ಕಾಲ ವರ್ಗಾವಣೆಗೆ ಅರ್ಹರಲ್ಲ ಎಂಬ ನೇಮಕಾತಿಯ ಷರತ್ತಿನನ್ವಯ ವರ್ಗಾವಣೆ ಪಡೆಯಲು ಅವಕಾಶವಿರುವುದಿಲ್ಲ.<br>ಜಿ.ಪಿ.ಟಿ ಶಿಕ್ಷಕರು ಪ್ರಾಥಮಿಕ ಶಾಲೆಗಳಿಗೆ ಹಾಗೂ ಟಿ.ಜಿ.ಟಿ ಶಿಕ್ಷಕರು ಪ್ರೌಢಶಾಲೆಗಳಿಗೆ ವರ್ಗಾವಣೆ ಪಡೆಯಲು ಅರ್ಹರಾಗಿರುತ್ತಾರೆ. |
| ಈ) | ಇತ್ತೀಚಿನ ವರ್ಗಾವಣೆಯಲ್ಲಿ ರಾಜ್ಯದಲ್ಲಿ ಟಿ.ಜಿ.ಟಿ ಶಿಕ್ಷಕರಿಗೆ ಹಾಗೂ ಜಿ.ಪಿ.ಟಿ ಶಿಕ್ಷಕರಿಗೆ ಎಷ್ಟು ಅವಕಾಶ | 2023-24ನೇ ಸಾಲಿನಲ್ಲಿ 2565 ಟಿ.ಜಿ.ಟಿ ಶಿಕ್ಷಕರು ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದು 289 ಶಿಕ್ಷಕರಿಗೆ ವರ್ಗಾವಣೆಯಾಗಿರುತ್ತದೆ. |

| | | |
|---|---|---|
| | ಕಲ್ಪಿಸಲಾಗಿದೆ;(ಮಾಹಿತಿ ನೀಡುವುದು) | 4337 ಜಿ.ಪಿ.ಟಿ ಶಿಕ್ಷಕರು ವರ್ಗಾವಣೆಗೆ ಅರ್ಜಿ ಸಲ್ಲಿಸಿದ್ದು 775 ಶಿಕ್ಷಕರಿಗೆ ವರ್ಗಾವಣೆ ಯಾಗಿರುತ್ತದೆ. |
| ಉ) | 2016ರ ಪೂರ್ವದಲ್ಲಿ 1 ರಿಂದ 7ನೇ ತರಗತಿಗಳಿಗೆ ನೇಮಕಗೊಂಡ ಪಿ.ಎಸ್.ಟಿ ವೃಂದದ ಶಿಕ್ಷಕರಿಗೆ ಜಿ.ಪಿ.ಟಿ(6-8) ವೃಂದಕ್ಕೆ ಬಡ್ತಿ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿ ಇದೆ; (ಮಾಹಿತಿ ನೀಡುವುದು); ಈ ಕುರಿತು ಅಧ್ಯಯನ ಮಾಡಿ ವರದಿ ಸಲ್ಲಿಸಲು ಉನ್ನತ ಮಟ್ಟದ ಸಮಿತಿ ರಚನೆ ಆಗಿದ್ದು, ಸದರಿ ಸಮಿತಿ ವರದಿ ಸಲ್ಲಿಸಿದೆಯೇ? (ವಿವರವಾದ ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ ಇಪಿ 370ಪಿಬಿಎಸ್ 2024 ದಿನಾಂಕ: 23/09/2024ರನ್ವಯ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಬೇಡಿಕೆಗಳ ಕುರಿತು ಪರಿಶೀಲಿಸಿ ವರದಿ ನೀಡಲು ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ.<br>ಸಮಿತಿಯು ಈಗಾಗಲೇ ಎರಡು ಬಾರಿ ಸಭೆ ನಡೆಸಿರುತ್ತದೆ. ಬೇಡಿಕೆಗಳ ಸಾಧಕ ಬಾಧಕಗಳು ಹಾಗೂ ನಿಯಮಗಳಲ್ಲಿನ ಅವಕಾಶಗಳ ಕುರಿತು ಪರಿಶೀಲಿಸಲಾಗುತ್ತಿದ್ದು ಪ್ರಕ್ರಿಯೆ ಪ್ರಗತಿಯಲ್ಲಿದೆ. |

**ಸಂಖ್ಯೆ: ಇಪಿ 96 ಪಿಎಂಎ 2024**

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು